# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1032** |
| ಉತ್ತರಿಸಬೇಕಾದ ದಿನಾಂಕ | : | 25.08.2026 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ನಗರ ವ್ಯಾಪ್ತಿಯಲ್ಲಿ ವಸತಿ ಇಲಾಖೆಯ (ರಾಜೀವ್ ಗಾಂಧಿ ವಸತಿ ನಿಗಮ, ಕರ್ನಾಟಕ ವಸತಿ ಮಂಡಳಿ(KHB) ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಗಳ) ಮೂಲಕ ಕೈಗೊಂಡಿರುವ ಪ್ರಮುಖ ವಸತಿ ಯೋಜನೆಗಳಾವುವು ; (ಯೋಜನೆಗಳ ಹೆಸರು ಹಾಗೂ ಬಡಾವಣೆ ಪ್ರದೇಶಗಳ ವಿವರ ನೀಡುವುದು) | **ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ :-**<br><br>ಮೈಸೂರು ನಗರ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ವಾಜಪೇಯಿ ನಗರ ವಸತಿ ಯೋಜನೆ.<br>2. ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ-ನಗರ<br>3. ದೇವರಾಜು ಅರಸು ವಸತಿ ಯೋಜನೆ-ನಗರ<br>4. ಪ್ರಧಾನ ಮಂತ್ರಿ ಆವಾಸ್ ಯೋಜನೆ- ನಗರ<br><br>**ಕರ್ನಾಟಕ ಗೃಹ ಮಂಡಳಿ :-**<br><br>ಕರ್ನಾಟಕ ಗೃಹ ಮಂಡಳಿಯು ಮೈಸೂರು ನಗರ ಪ್ರದೇಶ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಯಾವುದೇ ವಸತಿ ಯೋಜನೆ ಕೈಗೊಂಡಿರುವುದಿಲ್ಲ.<br><br>**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ :-**<br><br>ಮೈಸೂರು ನಗರದ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ವಿವಿಧ ವಸತಿ ಯೋಜನೆಗಳಲ್ಲಿ ನಿರ್ಮಿಸಿರುವ ವಸತಿ ಬಡಾವಣೆಗಳ ವಿವರಗಳು **ಅನುಬಂಧ-ಅ** ರಲ್ಲಿ ಒದಗಿಸಲಾಗಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಮೈಸೂರು ನಗರದ ಈ ವಸತಿ ಯೋಜನೆಗಳಿಗೆ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಒಟ್ಟು ಅನುದಾನ ಎಷ್ಟು ; (ವರ್ಷವಾರು ಮತ್ತು ಯೋಜನಾವಾರು ವಿವರ ನೀಡುವುದು) | **ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ :-**<br><br>ಸರ್ಕಾರವು ಅನುದಾನವನ್ನು ಜಿಲ್ಲಾವಾರು/ವಿಧಾನ ಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡದೇ ಒಟ್ಟಾರೆಯಾಗಿ ಯೋಜನಾವಾರು ಅನುದಾನವನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗುತ್ತಿದೆ.<br><br>ಅದರಂತೆ, ಕಳೆದ ಮೂರು ವರ್ಷಗಳಲ್ಲಿ ಅಂದರೆ 2023-24 ರಿಂದ 2025-26 ನೇ ಸಾಲಿನಲ್ಲಿ BLC ಘಟಕದಡಿ ಮೈಸೂರು ನಗರದಲ್ಲಿ ನಿಗಮದಿಂದ ಅನುಷ್ಠಾನ ಮಾಡಲಾಗುತ್ತಿರುವ ವಿವಿಧ ವಸತಿ ಯೋಜನೆಗಳಡಿ ಹಿಂದಿನ ಸಾಲುಗಳಲ್ಲಿ ಪ್ರಗತಿಯಲ್ಲಿರುವ ಮನೆಗಳನ್ನೊಳಗೊಂಡಂತೆ ಅರ್ಹ ಫಲಾನುಭವಿಗಳಿಗೆ ರೂ.1372.96 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವರ್ಷವಾರು ಮತ್ತು ಯೋಜನಾವಾರು ವಿವರಗಳು ಕೆಳಕಂಡಂತಿದೆ. |

(ರೂ.ಲಕ್ಷಗಳಲ್ಲಿ)

| ಯೋಜನೆ | 2023-24 | 2024-25 | 2025-26 | ಒಟ್ಟು |
|---|---|---|---|---|
| ವಾಜಪೇಯಿ ನಗರ ವಸತಿ ಯೋಜನೆ | 69.21 | 31.65 | 30.41 | 131.26 |
| ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ - ನಗರ | 85.60 | 46.08 | 49.38 | 181.05 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ | 180.83 | 219.45 | 660.37 | 1060.6 |
| ಒಟ್ಟು | 335.64 | 296.18 | 740.16 | 1372.9 |

ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಯೋಜನೆಯ ಎ.ಹೆಚ್.ಪಿ ಘಟಕದಡಿ ಮೈಸೂರು ನಗರದಲ್ಲಿ 2 ಯೋಜನೆಗಳನ್ನು (ಮಂಡಕಳ್ಳಿ-2446 ಮನೆಗಳು ಮತ್ತು ಲಲಿತಾದ್ರಿಪುರ- 1440 ಮನೆಗಳು) ನಿಗಮದ ವತಿಯಿಂದ ಅನುಷ್ಠಾನಗೊಳಿಸುತ್ತಿದ್ದು, ಸದರಿ ಯೋಜನೆಗಳಿಗೆ ಕಳೆದ 3 ವರ್ಷಗಳಲ್ಲಿ ರೂ.10337.07 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಯೋಜನೆ | 2023-24 | 2024-25 | 2025-26 | ಒಟ್ಟು |
|---|---|---|---|---|
| ಮಂಡಕಳ್ಳಿ-2446 | 1716.03 | 3720.28 | 997.57 | 6433.88 |
| ಲಲಿತಾದ್ರಿಪುರಂ-1440 | 0 | 2423.91 | 1479.28 | 3903.19 |
| ಒಟ್ಟು | 1716.03 | 6144.19 | 2476.85 | 10337.07 |

**ಕರ್ನಾಟಕ ಗೃಹ ಮಂಡಳಿ :-**

ಯಾವುದು ಇರುವುದಿಲ್ಲ.

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ :-**

ಮೈಸೂರು ನಗರದ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಅನುಷ್ಠಾನದಲ್ಲಿರುವ ಪ್ರಧಾನ ಮಂತ್ರಿ ಆವಾಸ್ ಯೋಜನೆ-ಹೆಚ್.ಎಫ್.ಎ ಯೋಜನೆಗಳ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಒಟ್ಟು ಅನುದಾನದ ವಿವರಗಳು **ಅನುಬಂಧ-ಆ** ರಲ್ಲಿ ಒದಗಿಸಲಾಗಿದೆ.

ಇ) ವಸತಿ ಇಲಾಖೆಯಲ್ಲಿ ಕೈಗೊಂಡಿರುವ ಮನೆಗಳ ನಿರ್ಮಾಣ ಹಂಚಿಕೆ ಪ್ರಕ್ರಿಯೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ಹಾಗೂ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲು ಕೈಗೊಂಡಿರುವ ಕ್ರಮಗಳೇನು ;

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ :-**

ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಅಡಿ ನಿರ್ಮಾಣ ಹಂತದಲ್ಲಿರುವ ಮನೆಗಳು ಕೆಳಕಂಡ ಕಾರಣಗಳಿಂದಾಗಿ ನಿರ್ಮಾಣ ಕಾರ್ಯವು ವಿಳಂಬವಾಗುತ್ತಿದೆ.

1. ಲಲಿತಾದ್ರಿಪುರಂನಲ್ಲಿ ಜಮೀನು ಹಸ್ತಾಂತರಿಸುವಲ್ಲಿ ವಿಳಂಬ, (a) ಲಲಿತಾದ್ರಿಪುರಂನಲ್ಲಿ 4 ಎಕರೆ ಜಮೀನಿಗೆ ಸ್ಥಳೀಯರ ಪ್ರತಿರೋಧ, (b) ಲಲಿತಾದ್ರಿಪುರಂನಲ್ಲಿ ಜಿ+2 ರಿಂದ ಎಸ್+9 ಗೆ ಬಹುಮಹಡಿ ಮಾದರಿ ಮಾರ್ಪಾಡು.
2. ಮಂಡಕಳ್ಳಿ ಜಮೀನಿನ ಕೊರತೆಯಿಂದಾಗಿ ಜಿ+2 ಯಿಂದ ಜಿ+3 ಗೆ ಮಾರ್ಪಾಡು.
3. ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ/ಎನ್.ಓ.ಸಿ ಪಡೆಯುವಲ್ಲಿ ವಿಳಂಬ.
4. ಫಲಾನುಭವಿಗಳ ಆಯ್ಕೆ ಮಾಡುವಲ್ಲಿ ವಿಳಂಬ.
5. ಫಲಾನುಭವಿಗಳು ವಂತಿಕೆ ಪಾವತಿಸುವಲ್ಲಿ ವಿಳಂಬ
6. ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿಯಲ್ಲಿ ವಿಳಂಬ.
7. ಮೂಲಸೌಕರ್ಯ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನದ ಕೊರತೆ.

ನಿಗಧಿತ ಕಾಲಮಿತಿಯೊಳಗೆ ಮನೆಗಳನ್ನು ಪೂರ್ಣಗೊಳಿಸಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

1. ಮಂಡಕಳ್ಳಿ ಮತ್ತು ಲಲಿತಾದ್ರಿಪುರಂ ಯೋಜನೆಗಳನ್ನು ಒಳಗೊಂಡಂತೆ, ನಗರ ಸ್ಥಳೀಯ ಸಂಸ್ಥೆಯ ಯೋಜನೆಗಳ ಫಲಾನುಭವಿಗಳ ವಂತಿಕೆ ಹಾಗೂ ಮೂಲಸೌಕರ್ಯ ವೆಚ್ಚಕ್ಕಾಗಿ ರೂ.1,866 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಭರಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.
2. ಯೋಜನೆವಾರು ಗುರಿ ಮತ್ತು ಕಾಲಮಿತಿ ನಿಗದಿಪಡಿಸಿ,

ಘಟಕದಡಿ ಮನೆ ನಿರ್ಮಾಣಕ್ಕೆ ಸಹಾಯಧನ ಒದಗಿಸಲಾಗುವುದು.

Interest Subsidy Scheme ಯೋಜನೆಯಡಿ ಅರ್ಹ EWS/LIG/MIG ಕುಟುಂಬಗಳಿಗೆ ಮನೆ ಖರೀದಿ ಅಥವಾ ನಿರ್ಮಾಣಕ್ಕಾಗಿ ಬ್ಯಾಂಕ್‌ಗಳ ಮೂಲಕ ಬಡ್ಡಿ ಸಹಾಯಧನ ಒದಗಿಸಲಾಗುವುದು.

**ಕರ್ನಾಟಕ ಗೃಹ ಮಂಡಳಿ :-**

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೆಳಕಂಡ ಹೊಸ ವಸತಿ ಯೋಜನೆಯನ್ನು ಕೈಗೊಳ್ಳಲು ಮಂಡಳಿಯಿಂದ ಅನುಮೋದನೆಯಾಗಿರುತ್ತದೆ.

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಷರಾ |
|---|---|---|---|---|
| 1. | ಮೈಸೂರು | ಮೈಸೂರು | ಉದ್ಬೂರು ಮತ್ತು ಕಳಲವಾಡಿ | ಅಧಿಸೂಚನೆ ತಯಾರಿಕೆ ಹಂತದಲ್ಲಿರುತ್ತದೆ. |
| 2 | | | ವಾಜಮಂಗಲ | |
| 3. | | | ಹಾರೋಹಳ್ಳಿ | ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. |
| 4. | ಮೈಸೂರು | ಮೈಸೂರು | ಬೊಮ್ಮನಹಳ್ಳಿ, ಮಾಣಿಕ್ಯಪುರ, ಕಮ್ಮರಹಳ್ಳಿ, ಹಾಗೂ ಇತರೆ | ಅಧಿಸೂಚನೆ ತಯಾರಿಕೆ ಹಂತದಲ್ಲಿರುತ್ತದೆ. |

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ :-**

ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) 2.0 ನ್ನು ಸೆಪ್ಟೆಂಬರ್ 2024 ರಲ್ಲಿ ಜಾರಿಗೊಳಿಸಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶದ ದಿನಾಂಕ:23.05.2025 ರ ಮಾರ್ಗಸೂಚಿಯಂತೆ ಮನೆಗಳ ನಿರ್ಮಾಣಕ್ಕೆ ಗುರಿ ನಿಗಧಿಪಡಿಸುವ ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿರುತ್ತದೆ.

ಸಂಖ್ಯೆ :ವಇ 187 ಆರ್‌ಐ 2026

**(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)**
ವಸತಿ ಸಚಿವರು

LCQ - 1032

# ಅನುಬಂಧ-ಅ

**ಮೈಸೂರು ನಗರದ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ವಿವಿಧ ವಸತಿ ಯೋಜನೆಗಳಲ್ಲಿ ನಿರ್ಮಿಸಿರುವ ವಸತಿ ಬಡಾವಣೆಗಳ ವಿವರಗಳು**

| ಕ್ರಮ ಸಂಖ್ಯೆ | ವಿಧಾನಸಭಾ ಕ್ಷೇತ್ರದ ಹೆಸರು | ವಸತಿ ಪ್ರದೇಶಗಳ ಸಂಖ್ಯೆ | ನಿರ್ಮಿಸಿರುವ ಮನೆಗಳ ಸಂಖ್ಯೆ | | | | | |
|---|---|---|---|---|---|---|---|---|
| | | | ಹುಡ್ಕೋ (1984-02) | ವಾಂಬೆ (2003-05) | ಎಸ್.ಸಿ.ಪಿ (2003-05) | ನರ್ಮ್ - ಬಿ.ಎಸ್.ಯು.ಪಿ (2010-12) | ಪಿ.ಎಂ.ಎ.ವೈ - ಹೆಚ್.ಎಫ್.ಎ (2018-26) | ಒಟ್ಟು |
| 1 | ಕೃಷ್ಣರಾಜ ವಿಧಾನಸಭಾ ಕ್ಷೇತ್ರ | 10 | 584 | 102 | 144 | 32 | 694 | 1556 |
| 2 | ಚಾಮರಾಜ ವಿಧಾನಸಭಾ ಕ್ಷೇತ್ರ | 19 | 683 | 63 | 0 | 968 | 373 | 2087 |
| 3 | ನರಸಿಂಹರಾಜ ವಿಧಾನಸಭಾ ಕ್ಷೇತ್ರ | 23 | 1356 | 163 | 0 | 1424 | 435 | 3378 |
| 4 | ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ | 10 | 0 | 319 | 0 | 3904 | 0 | 4223 |
| | **ಮೈಸೂರು ನಗರ ಒಟ್ಟು** | **62** | **2623** | **647** | **144** | **6328** | **1502** | **11244** |

Executive Engineer
Karnataka Slum Development Board
No. 1, Division, Mysore

Assistant Executive Engineer,
Karnataka Slum Development Boa
No. 2, Sub-Division, Mysuru.

Executive Engineer
Karnataka Slum Development Board
No. 2, Division, Mysore

LCQ-1032

## ಅನುಬಂಧ-ಆ

ಮೈಸೂರು ನಗರದ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಅನುಷ್ಠಾನದಲ್ಲಿರುವ ಪಿ.ಎಂ.ಎ.ವೈ-ಹೆಚ್.ಎಫ್.ಎ ಯೋಜನೆಗಳ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರಗಳು

| ಕ್ರಮಸಂಖ್ಯೆ | ವಿಧಾನಸಭಾ ಕ್ಷೇತ್ರದ ಹೆಸರು | ಮಂಜೂರಾದ ಮನೆಗಳ ಸಂಖ್ಯೆ | ಪ್ರಾರಂಭಿಸಿರುವ ಮನೆಗಳ ಸಂಖ್ಯೆ | ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ | ಪಿ.ಎಂ.ಎ.ವೈ-ಹೆಚ್.ಎಫ್.ಎ ಯೋಜನೆಯಡಿ ಬಿಡುಗಡೆಗೊಳಿಸಲಾಗಿರುವ ಅನುದಾನ (ರೂ. ಲಕ್ಷಗಳಲ್ಲಿ) | | |
|---|---|---|---|---|---|---|---|---|
| | | | | | | 2023-24 | 2024-25 | 2025-26 |
| 1 | ಕೃಷ್ಣರಾಜ ವಿಧಾನಸಭಾ ಕ್ಷೇತ್ರ | 3541 | 2781 | 2087 | 694 | 667.24 | 418.89 | 394.91 |
| 2 | ಚಾಮರಾಜ ವಿಧಾನಸಭಾ ಕ್ಷೇತ್ರ | 655 | 513 | 140 | 373 | 506.75 | 458.28 | 156.45 |
| 3 | ನರಸಿಂಹರಾಜ ವಿಧಾನಸಭಾ ಕ್ಷೇತ್ರ | 675 | 640 | 205 | 435 | 135.51 | 125.36 | 0 |
| 4 | ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ | 0 | 0 | 0 | 0 | 0 | 0 | 0 |
| ಮೈಸೂರು ನಗರ ಒಟ್ಟು | | 4871 | 3934 | 2432 | 1502 | 1309.5 | 1002.53 | 551.36 |

Executive Engineer
Karnataka Slum Development Board
No. 1, Division, Mysore

Assistant Executive Engineer,
Karnataka Slum Development Board,
No. 2, Sub-Division, Mysuru.



No. DOH/187/RI/2026-Randi-Housing SECRETARIAT (Computer No. 2274214)

Scanned with OKEN Scanner